ಬಸವನಗುಡಿ ಕ್ಷೇತ್ರದ ಗವಿಗಂಗಾಧರೇಶ್ವರ ದೇವಸ್ಥಾನ ಜೀರ್ಣೋದ್ಧಾರ

2865(3647) ಶ್ರೀ ಸುಬ್ಬಾ ರೆಡ್ಡಿ ಕೆ.ಎನ್. (ಬಸವನಗುಡಿ):- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬಸವನಗುಡಿ ಕ್ಷೇತ್ರದ ಗವಿಗಂಗಾಧರೇಶ್ವ ದೇವಸ್ಥಾನವು ಇತ್ತೀಚೆಗೆ ಭಾರಿ ಮಳೆಯಿಂದ ಹಾನಿಯಾಗಿರತುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದ್ದಿದಲ್ಲಿ ದೇವಾಲಾಯದ ದುರಸ್ಥಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಬುರಾವ್ ಚಿಂಚನಸೂರ್ (ಮುಜರಾಯಿ ಸಚಿವರು):-

ಅ) -ಬಂದಿದೆ-

ಆ) ಬೆಂಗಳೂರು ಗವೀಪುರ ಬಡಾವಣೆಯಲ್ಲಿರುವ ಶ್ರೀ ಗವಿಗಂಗಾಧರೇಶ್ವರ ಸ್ವಾಮಿ ದೇವಾಲಯದ ಹೊರಭಾಗ (ಕಾಂಪೌಂಡ್) ಕಲ್ಲಿನ ಗೋಡೆಯು ದಿನಾಂಕ: 1-6-2000 ರಂದು ಭಾರಿ ಮಳೇಯಿಂದಾಗಿ ಬಿದ್ದು ಹೋಗಿರುತ್ತದೆ. ಸದರಿ ಗೋಡೆಯನ್ನು ರೂ. 50,000-00 ಅಂದಾಜು ವೆಚ್ಚದಲ್ಲಿ ಈಗಾಗಲೇ ದುರಸ್ಥಿಪಡಿಸಲಾಗಿದೆ.

ಕಾರ್ಗಿಲ್ ಸಂತ್ರಸ್ಥ ಯೋಧರ ಕುಟುಂಬಕ್ಕೆ ನೆರವು

2867 (3654) ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಸರ್ಕಾರವು ಕಾರ್ಗಿಲ್ ಯುದ್ಧ ಸಂತ್ರಸ್ಥ ಯೋಧರ ಮತ್ತು ಯೋಧರ ಕುಟುಂಬಗಳಿಗೆ ನೆರವಿಗಾಗಿ ನೀಡಲಾದ ಮೊತ್ತವೆಷ್ಟು?

ಅ) ಈ ಯೋಧರ ಕುಟುಂಬಗಳಿಂದ ನೆರವಿಗಾಗಿ ಕೋರಿ ಬಂದ ಮನವಿಗಳೆಷ್ಟು?

3) ಮನವಿಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):-

1) ಒಟ್ಟು ಮೊತ್ತ ರೂ. 35 ಲಕ್ಷಗಳು

2) 1) ಅನುಗ್ರಹಪೂರ್ವಕ ಅನುದಾನಕ್ಕಾಗಿ 16

2) ಜಮೀನಿನ ಬದಲಾಗಿ ನಗದು ಅನುದಾನಕ್ಕಾಗಿ 12

2) 1) ತಲಾ 2 ಲಕ್ಷಗಳಂತೆ 16 ಪ್ರಕರಣಗಳಿಗೆ ಅನುಗ್ರಹಪೂರ್ವ ಅನುದಾನ ರೂ. 32.00 ಲಕ್ಷಗಳನ್ನು ವಿತರಿಸಲಾಗಿದೆ.

2) ತಲಾ ರೂ. 25,000-00 ಗಳಂತೆ 133 ಪ್ರಕರಣಗಳಿಗೆ ಜಮೀನಿನ ಬದಲಾಗಿ ನಗದು ಅನುದಾನ ರೂ..3 ಲಕ್ಷಗಳನ್ನು ವಿತರಿಸಲಾಗಿದೆ. ಉಳಿದ ನಾಲ್ಕುಪ್ರಕರಣಗಳಿಗೆ ಫಲಾನುಭವಿಗಳಿಂದ ಒಪ್ಪಿಗೆ ಪತ್ರ ಕೇಳಲಾಗಿದೆ.

3) ಅವಲಂಬಿತರಿಗೆ ಗ್ಯಾಸ್ ಮತ್ತು ಪೆಟ್ರೋಲ್ ಏಜೆನ್ಸಿಗಳಿಗೆ ಏಳು ಅರ್ಜಿಗಳು ಬಂದಿದ್ದು, ಅವುಗಳನ್ನು ಸಂಬಂಧಪಟ್ಟ ಇಲಾಖೆಗೆ ಶಿಫಾರಸ್ಸು ಮಾಡಲಾಗಿದೆ.

ಕಾರಾಗೃಹಗಳ ಸುಧಾರಣೆ ಕುರಿತು

2868 (3659) ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿರುವ ಪೋಲೀಸ್ ಕಾರಾಗೃಹಗಳ ನಿರ್ವಹಣೆ ಸುಧಾರಣೆಗೆ ಪ್ರಸಕ್ತ ಸಾಲಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಬೆಂಗಳೂರು ಸೆಂಟ್ರಲ್ ಜೈಲನ್ನು ಸ್ಥಳಾಂತರಿಸುವ ಯೋಜನೆ ಸರ್ಕಾರಕ್ಕ ಇದೆಯೇ?

ಇ) ಇದ್ದಲ್ಲಿ ಯಾವಾಗ ಸ್ಥಳಾಂತರಿಸಲಾಗುವುದು ಹಾಗೂ ಎಲ್ಲಿಗೆ ಸ್ಥಳಾಂತರಿಸಲಾಗುವುದು.

ಈ) ಜೈಲಿನಿಂದ ಅಪರಾಧಿಗಳು ಪಾರಾಗಿ ಆಗುವ ಪ್ರಕರಣಗಳು ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಸ್ಥಳಾಂತರವಾದ ಪ್ರದೇಶವನ್ನು ಯಾವ ರೀತಿಯಲ್ಲಿ ಬಳಸುವ ಯೋಜನೆ ಹೊಂದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):-

ಅ) ರಾಜ್ಯದಲ್ಲಿ ಈ ಕೆಳಗಿನಂತೆ ಹೊಸದಾಗಿ ವಾರ್ಷಿಕ ಯೋಜನೆಗಳಡಿಯಲ್ಲಿ ಕಾರಾಗೃಹಗಳನ್ನು ನಿರ್ವಹಿಸಲಾಗುತ್ತಿದ್ದು ಅವುಗಳಲ್ಲಿ ತಾಲ್ಲೂಕು ಉಪ ಕಾರಾಗೃಹ ನಂಜನಗೂಡು, ಹಡಗಲಿ ಹಾಗೂ ನರಸಿಂಹ ರಾಜಪುರದಲ್ಲಿ ಕಾಮಗಾರಿ ಈ ಗಾಗಲೇ ಮುಗಿದಿದ್ದು ಸಧ್ಯದಲ್ಲಿಯೇ ಇಲಾಖೆ ವಶಕ್ಕೆ ಪಡೆದು ಜೈಲು ಪ್ರಾರಂಭಸಲಾಗುತ್ತಿದೆ. ಉಳಿದಂತೆ ಬೆಂಗಳೂರು, ಚಿಕ್ಕಮಗಳೂರು ಹಾಗೂ ಆಳಂದದಲ್ಲಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮೈಸೂರು ಜೈಲಿನಲ್ಲಿ ಹೊಸದಾಗಿ ಬಂದಿಗಳಿಗೆ ಬ್ಯಾರಕ್ಕೂಗಳನ್ನು ನಿರ್ಮಿಸಲಾಗುತ್ತಿದ್ದುಕಾಮಗಾರಿ ಪ್ರಗತಿಯಲ್ಲಿದೆ. ಕೈದಿಗಳ ಮನೋಪ್ರವೃತ್ತಿ ಮಾರ್ಪಡಿಸಲು ಈ ಕೆಳಕಂಡಂತೆ ಸುಧಾರಣಾ ಕ್ರಮಗಳನ್ನುಕೈಗೊಳ್ಳಲಾಗಿದೆ.

1) ವೃತ್ತಿ ಶಿಕ್ಷಣ ತರಬೇತಿ

2) ಮಜೂರಿ ಗಳಿಕೆ ಯೋಜನೆ

3) ಅಧುನಿಕ ರೀತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ತರಭೇತಿ

4) ಶಿಕ್ಷಣ ಮತ್ತು ವಾಚನಾಲಯ

5) ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆ

6) ಸಂದರ್ಶನ ಪದ್ಧತಿ

7) ಪೆರೋಲ್ ಮತ್ತು ಫರ್ಲೋ ರಜೆ

8) ಅವಧಿ ಪೂರ್ವ ಬಿಡುಗಡೆ